# ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 258 ಯೋಯೋಕ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 20-03-2009.

## ಸುತ್ತೋಲೆ

ವಿಷಯ: "ಅಂಗೈ ಕನ್ನಡದಲ್ಲಿ e-ಜಗತ್ತು" ಕಂಪ್ಯೂಟರ್ ಕಲಿಕಾ ಸಿ.ಡಿ. ಯನ್ನು ಖರೀದಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ 23-10-2008ರ ಮೆ: ವಿಲೇಜ್ ಮಲ್ಟಿ ಮೀಡಿಯಾ, ಚಿಕ್ಕನಾಯಕನ ಹಳ್ಳಿ, ತುಮಕೂರು ಜಿಲ್ಲೆ ಇವರ ಪತ್ರ.
2. ದಿನಾಂಕ: 12-02-2009, ಸಂಖ್ಯೆ: ಇಟಿಸಿ 5-ಅಂಗೈ ಕನ್ನಡ ಕಂ.ಕಲಿಕಾ.ಸಿ.ಡಿ.-01:2008-09ರ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರುರವರ ಪತ್ರ.
3. ದಿನಾಂಕ: 07-03-2009 ಸಂಖ್ಯೆ: ನಿ(ಪ್ರೌ.ಶಿ.)ಗಣಕಯಂತ್ರ. 2008-09ರ ನಿರ್ದೇಶಕರು (ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ.

******

1) ಮೆ: ವಿಲೇಜ್ ಮಲ್ಟಿ ಮೀಡಿಯಾ, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ ಇವರು ಕನ್ನಡದಲ್ಲಿ ವಿಡಿಯೋ ಚಿತ್ರೀಕರಣ ಮತ್ತು ಧ್ವನಿ (Animation Graphics ಮತ್ತು ಧ್ವನಿ) ಮೂಲಕ ಕಂಪ್ಯೂಟರ್ ಬಗ್ಗೆ ಸಾಮಾನ್ಯರಿಗೂ ತಿಳುವಳಿಕೆ ನೀಡುವ ಒಂದು ಪ್ರಯತ್ನ ಮಾಡಿ "ಅಂಗೈ ಕನ್ನಡದಲ್ಲಿ e-ಜಗತ್ತು" ಎಂಬ ಒಂದು ಕಂಪ್ಯೂಟರ್ ಕಲಿಕಾ ಸಿ.ಡಿ.ಯನ್ನು ಸಿದ್ಧಪಡಿಸಿರುವುದಾಗಿ ಮತ್ತು ಈ ಸಿ.ಡಿ. ಯಲ್ಲಿ ನಾಲ್ಕು (4) ಅಧ್ಯಾಯಗಳಿದ್ದು, ಅವುಗಳು ಕ್ರಮ ವಾಗಿ (1) ವಿಂಡೋಸ್, (2) ಇಂಟರ್‌ನೆಟ್ (3) ಹಾರ್ಡ್‌ವೇರ್ ಮತ್ತು (4) ಕಂಪ್ಯೂಟರ್ ಪದಕೋಶಗಳ ವಿಶೇಷತೆಗಳ ಮಾಹಿತಿಗಳನ್ನು ಒಳಗೊಂಡಿರುತ್ತದೆ ಎಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ ಹಾಗೂ 126 ಪ್ರಶ್ನೋತ್ತರಗಳ ಮೂಲಕ ನಿರಂತರ 17 ಗಂಟೆಗಳ ವಿಡಿಯೋ ಚಿತ್ರೀಕರಣ ಮತ್ತು ಧ್ವನಿಯನ್ನು ಹೊಂದಿರುವ ಈ ಸಿ.ಡಿ.ಯು ಶಿಕ್ಷಣ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗ ಹಾಗೂ ಬೋಧಕ ವರ್ಗದವರನ್ನು ಒಳಗೊಂಡಂತೆ ವಿದ್ಯಾರ್ಥಿಗಳಿಗೂ ಸಹ ಕಂಪ್ಯೂಟರ್ ಬಳಕೆಯನ್ನು ಕನ್ನಡದಲ್ಲಿ ತಿಳಿಸಿ ಕೊಡುವುದರಿಂದ ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಂತೆ ಎಲ್ಲಾ ವಿದ್ಯಾರ್ಥಿಗಳೂ ಕೂಡ ಸರಳವಾಗಿ ಕಂಪ್ಯೂಟರ್ ಬಳಕೆಯನ್ನು ಮಾಡು ವುದಕ್ಕೆ ಮತ್ತು ಕಂಪ್ಯೂಟರ್ ಜ್ಞಾನ ಸಂಪಾದನೆಗೆ ಅನುವಾಗುವುದೆಂದು ಸಂಸ್ಥೆಯು ಅಭಿಪ್ರಾಯಿ ಸಿದ್ದೆ

2) ಕಂಪ್ಯೂಟರ್ ಸೌಲಭ್ಯವನ್ನು ಹೊಂದಿರುವ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಬೋಧಕ ವರ್ಗದವರನ್ನು ಒಳಗೊಂಡಂತೆ ವಿದ್ಯಾರ್ಥಿಗಳೂ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತಾಲಯಗಳ ಕಛೇರಿಗಳ, ಸಹ ನಿರ್ದೇಶಕರುಗಳ, ಉಪ ನಿರ್ದೇಶಕರುಗಳ ಮತ್ತು ಬ್ಲಾಕ್ ಎಜುಕೇಶನ್ ಆಫೀಸರುಗಳವರ ಕಛೇರಿಗಳ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಕಛೇರಿಗಳ, ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಾಂಶುಪಾಲರುಗಳ ಕಛೇರಿಗಳ ಹಾಗೂ ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗಳ ಸಿಬ್ಬಂದಿ ವರ್ಗದವರು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರ ಕಛೇರಿಗಳ ಸಿಬ್ಬಂದಿ ವರ್ಗದವರು ಮತ್ತು ಗ್ರಂಥಾಲಯ ಗಳ ಅಧಿಕಾರಿ/ಸಿಬ್ಬಂದಿ ವರ್ಗದವರು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಗಳ, ಸಹ ನಿರ್ದೇಶಕರ ಕಛೇರಿಗಳ, ಉಪ ನಿರ್ದೇಶಕರ ಕಛೇರಿಗಳ ಸಿಬ್ಬಂದಿ ವರ್ಗದವರು **"ಅಂಗೈ ಕನ್ನಡದಲ್ಲಿ e-ಜಗತ್ತು"** ಕಂಪ್ಯೂಟರ್ ಕಲಿಕಾ ಸಿ.ಡಿ.ಯನ್ನು ಉಪಯೋಗಿಸುವುದರ ಮೂಲಕ ಗಣಕ ಯಂತ್ರ ಬಳಸುವ ಮತ್ತು ಕಂಪ್ಯೂಟರ್ ಜ್ಞಾನದ ಬಗ್ಗೆ ಹೆಚ್ಚಿನ ಪ್ರಬುದ್ಧತೆಯನ್ನು ಪಡೆಯಬಹುದಾಗಿದೆ.

3) ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಸದರಿ ಸಿ.ಡಿ. ಯನ್ನು ಪರಿಶೀಲಿಸಿ ಮೆ. ವಿಲೇಜ್ ಮಲ್ಟಿ ಮೀಡಿಯಾದವರು ಸಿದ್ಧಪಡಿಸಿರುವ **"ಅಂಗೈ ಕನ್ನಡದಲ್ಲಿ e-ಜಗತ್ತು"** ಕಂಪ್ಯೂಟರ್ ಕಲಿಕಾ ಸಿ.ಡಿ.ಯನ್ನು ಶಾಲೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕಛೇರಿಗಳ ಲ್ಲಿಯೂ ಬಳಸಿಕೊಂಡು ಕಂಪ್ಯೂಟರ್ ಕಲಿಕೆಯನ್ನು ಸುಲಭವಾಗಿ ಕಲಿಯಲು ಸಹಕಾರಿ ಯಾಗಬಲ್ಲದು ಎಂದು ಅಭಿಪ್ರಾಯಿಸಿದೆ. ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ **e**-ಆಡಳಿತ ಘಟಕವು ಸಹ ಪರಿಶೀಲಿಸಿ **"ಅಂಗೈ ಕನ್ನಡದಲ್ಲಿ e-ಜಗತ್ತು"** ಕಂಪ್ಯೂಟರ್ ಕಲಿಕಾ ಸಿ.ಡಿ.ಯಲ್ಲಿ ಕಛೇರಿಯಲ್ಲಿ ಗಣಕ ಯಂತ್ರ ಉಪಯೋಗಿಸುವ ಎಲ್ಲಾ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಅನುಕೂಲ ಕರವಾದ ಮಾಹಿತಿಯನ್ನು ಒದಗಿಸಲಾಗಿದೆಯೆಂದು ಅಭಿಪ್ರಾಯಿಸಿದೆ.

4) ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಒದಗಿಸಲಾಗಿರುವ ವಾಚನಾಲಯ (ಆರ್.ಆರ್./ ಗ್ರಂಥಾಲಯ)ದ ನಿಧಿಯಿಂದ, ಇತರೆ ಸಂಚಿತ ನಿಧಿಯಿಂದ ಅಥವಾ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಿಂದ ಅಥವಾ ಇತರೆ ಶಾಲಾ ನಿಧಿಯ ಅನುದಾನದಿಂದ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಕಛೇರಿ ವೆಚ್ಚದ ಅಥವಾ ಸಾದಿಲ್ವಾರು ವೆಚ್ಚದ ಅನುದಾನದಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯಗಳ ಕಛೇರಿಗಳು, ಸಹ ನಿರ್ದೇಶಕರುಗಳ ಕಛೇರಿಗಳು, ಉಪ ನಿರ್ದೇಶಕರು ಗಳ ಕಛೇರಿಗಳು ಮತ್ತು ಬ್ಲಾಕ್ ಎಜುಕೇಶನ್ ಆಫೀಸರುಗಳ ಕಛೇರಿಗಳು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಕಛೇರಿಗಳು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಕಛೇರಿಗಳು, ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗಳು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕಛೇರಿಗಳು ಮತ್ತು ಗ್ರಂಥಾಲಯಗಳು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಸಹ ನಿರ್ದೇಶಕರ ಕಛೇರಿಗಳು ಮತ್ತು ಉಪ ನಿರ್ದೇಶಕರ ಕಛೇರಿಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ರವುಗಳಲ್ಲಿನ ಸೂಚನೆಗಳನ್ನು ಪಾಲಿಸಿ "ಅಂಗೈ ಕನ್ನಡದಲ್ಲಿ e-ಜಗತ್ತು"

ಕಂಪ್ಯೂಟರ್ ಕಲಿಕಾ ಸಿ.ಡಿ.ಯನ್ನು ಅಗತ್ಯತೆ ಕಂಡುಬಂದಲ್ಲಿ ಖರೀದಿಸಬಹುದು. ಈ ಸಿ.ಡಿ.ಯ ಬೆಲೆ ರೂ. 390/–ಗಳು(ಮೂರುನೂರ ತೊಂಭತ್ತು ರೂಪಾಯಿಗಳು ಮಾತ್ರ). ಸರಬರಾಜು ಬಗ್ಗೆ ಸಂಸ್ಥೆಯನ್ನು ಸಂಪರ್ಕಿಸಲು ತಿಳಿಸಿದೆ. ಈ ಸಿ.ಡಿ.ಯ ಸರಬರಾಜುದಾರರ ಸಂಸ್ಥೆಯ ವಿಳಾಸ: ಮೆ: ವಿಲೇಜ್ ಮಲ್ಟಿ ಮೀಡಿಯಾ, ನಂ. 491, 2ನೇ ಮುಖ್ಯರಸ್ತೆ, ವಿದ್ಯಾನಗರ, ಚಿಕ್ಕನಾಯಕನ ಹಳ್ಳಿ–572214, ತುಮಕೂರು ಜಿಲ್ಲೆ.

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

ಇವರಿಗೆ :

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಧಾರವಾಡ, ಮತ್ತು ಗುಲ್ಬರ್ಗಾ,
2. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
3. ನಿರ್ದೇಶಕರು, (ಪ್ರಾಥಮಿಕ) ಮತ್ತು (ಪ್ರೌಢ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
5. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
6. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
7. ಎಲ್ಲಾ ಮುಖ್ಯ ಗ್ರಂಥಾಧಿಕಾರಿಗಳು, ಸಾರ್ವಜನಿಕ ಗ್ರಂಥಾಲಯ ಇಲಾಖೆ. (ನಿರ್ದೇಶಕರ ಮುಖಾಂತರ)
8. ಎಲ್ಲಾ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, (ಆಯುಕ್ತರ ಮುಖಾಂತರ).
9. ಎಲ್ಲಾ ಸಹ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, (ಆಯುಕ್ತರ ಮುಖಾಂತರ).
10. ಸಹ ನಿರ್ದೇಶಕರು (ಮಧ್ಯಾಹ್ನ ಉಪಹಾರ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, (ಆಯುಕ್ತರ ಮುಖಾಂತರ).
12. ಎಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, (ಆಯುಕ್ತರ ಮುಖಾಂತರ).
13. ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಾಂಶುಪಾಲರುಗಳು (ಡಿ.ಎಸ್.ಇ.ಆರ್.ಟಿ. ನಿರ್ದೇಶಕರ ಮುಖಾಂತರ).
14. ಎಲ್ಲಾ ಬ್ಲಾಕ್ ಎಜುಕೇಶನ್ ಆಫೀಸರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರ ಮುಖಾಂತರ).
15. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
16. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
17. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, (ಆಯುಕ್ತರ ಮುಖಾಂತರ).
18. ಉಪ ನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ. 49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
19. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.

20. ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬೆಂಗಳೂರು.
21. ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ), (ಪ್ರೌಢ), (ಸಾಮಾನ್ಯ), ಶಿಕ್ಷಣ ಇಲಾಖೆ.
22. ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
23. ಸಾಪ್ತಾಹಿಕ ರಾಜ್ಯ ಪತ್ರ / ಕಛೇರಿ ಪ್ರತಿ
24. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ ಇವರಿಗೆ:–

ಮೆ: ವಿಲೇಜ್ ಮಲ್ಟಿ ಮೀಡಿಯಾ, ನಂ. 491, 2ನೇ ಮುಖ್ಯರಸ್ತೆ, ವಿದ್ಯಾನಗರ, ಚಿಕ್ಕನಾಯಕನಹಳ್ಳಿ –572214, ತುಮಕೂರು ಜಿಲ್ಲೆ.

**ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು–01**

ಸಂಖ್ಯೆ:ಯೋ5,ಅ.ಕ.ಇ.ಜಗತ್ತು ಕಂ.ಸಿಡಿ.ಖ.ಬಗ್ಗೆ 3/09–10 ದಿನಾಂಕ:24–8–2009

ಸರ್ಕಾರದ ಆದೇಶದ ಸಂಖ್ಯೆ 258 ಯೋಯೋಕ 2008 ದಿ:20.03.2008 ರ ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರು (ಪ್ರೌಢಶಿಕ್ಷಣ)

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರುಗಳಿಗೆ
3. ರಾಜ್ಯದ ಎಲ್ಲಾ ಶಿಕ್ಷಣ ಮಹಾವಿದ್ಯಾಲಯ ಪ್ರಾಶುಪಾಲರು.
4. ರಾಜ್ಯದ ಎಲ್ಲಾ ಶಿಕ್ಷಣ ತರಭೇತಿ ಸಂಸ್ಥೆಯ ಪ್ರಾಶುಪಾಲರು.
5. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು. (ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಉಪನಿರ್ದೇಶಕರುಗಳ ಮೂಲಕ)
7. ಹಿರಿಯ ಸಹಾಯಕ ನಿರ್ದೇಶಕರು (ಇ. ಆಡಳಿತ) ಆಯುಕ್ತರ ಕಛೇರಿ ಇವರಿಗೆ, ವೆಬ್ ಸೈಟನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವಿಲೇಜ್ ಮೀಡಿಯ ನಂ:491 2ನೇ ಮುಖ್ಯ ರಸ್ತೆ. ವಿದ್ಯಾನಗರ ಚಿಕ್ಕನಾಯಕನಹಳ್ಳಿ ತುಮಕೂರು ಜಿಲ್ಲೆ. ಇವರ ಮಾಹಿತಿಗಾಗಿ
9. ಕಛೇರಿ ಪ್ರತಿ.